**ಕರ್ನಾಟಕ ಸರ್ಕಾರ**

**ಕಾನೂನು ಮಾಪನಶಾಸ್ತ್ರ ಇಲಾಖೆ**

ಸಂಖ್ಯೆ:ಕಾಮಾಇ/ಸ.ಪ್ರ,ಪ/ಸಿಆರ್- 03/2021-22

ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಛೇರಿ
ನಂ.1, ಆಲಿ ಆಸ್ಕರ್ ರಸ್ತೆ, ಪಿ.ಬಿ.ನಂ.175
ಬೆಂಗಳೂರು-52, ದಿನಾಂಕ:19-04-2021.

**ಕಛೇರಿ ಆದೇಶ**

**ವಿಷಯ:** ಇಲಾಖೆಯಿಂದ ನೀಡಲಾಗುತ್ತಿರುವ ಸತ್ಯಾಪನಾ ಪ್ರಮಾಣ ಪತ್ರ /ಮರು ಸತ್ಯಾಪನಾ ಪ್ರಮಾಣ ಪತ್ರ ನೀಡುವ ಕಾರ್ಯವನ್ನು ಆನ್‌ಲೈನ್‌ಗೊಳಿಸುವ ಬಗ್ಗೆ.

**ಉಲ್ಲೇಖ:** ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆರವರ ಪತ್ರ ಸಂಖ್ಯೆ: KUM/E9/32/ 2020-21/ EODB/DBRAP, ದಿನಾಂಕ:15-06-2020.

*******

ಪ್ರಸ್ತುತ ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ Ease of Doing Business ಗೆ ಸಂಬಂಧಿಸಿದಂತೆ ಅನುಜ್ಞಾಪತ್ರಗಳ ವಿತರಣೆ/ಸ್ವಯಂಚಾಲಿತ ನವೀಕರಣ ಹಾಗೂ ಪೊಟ್ಟಣ ಸಾಮಗ್ರಿ ನಿಯಮದಡಿ ನೋಂದಣಿ ಪ್ರಮಾಣ ಪತ್ರಗಳ ನೀಡುವ ಕಾರ್ಯಗಳನ್ನು ಜಾರಿಗೊಳಿಸಲಾಗುತ್ತಿದೆ. ಉಲ್ಲೇಖಿತ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆರವರು ಪ್ರಸ್ತುತ ಇಲಾಖೆಯಿಂದ ಇ-ಮಾಪನ್ ತಂತ್ರಾಶದಲ್ಲಿ ನೀಡಲಾಗುತ್ತಿರುವ ಸತ್ಯಾಪನಾ ಪ್ರಮಾಣ ಪತ್ರ/ಮರು ಸತ್ಯಾಪನಾ ಪ್ರಮಾಣ ಪತ್ರಗಳನ್ನು ಸಹ Ease of Doing Business ಅಡಿಯಲ್ಲಿ ಆನ್‌ಲೈನ್‌ಗೊಳಿಸುವಂತೆ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಮೆ:ಕಿಯೋನಿಕ್ಸ್, ಸಂಸ್ಥೆಯವರನ್ನು ಇ-ಮಾಪನ್ ತಂತ್ರಾಂಶದಲ್ಲಿ ಸತ್ಯಾಪನಾ ಪ್ರಮಾಣ ಪತ್ರ/ಮರು ಸತ್ಯಾಪನಾ ಪ್ರಮಾಣ ಪತ್ರಗಳನ್ನು ನೀಡುವ ಕಾರ್ಯವನ್ನು ಸಹ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸುವಂತೆ ತಿಳಿಸಲಾಗಿತ್ತು.

ಅದರಂತೆ ಮೆ:ಕಿಯೋನಿಕ್ಸ್ ಸಂಸ್ಥೆಯವರು ಹಾಲಿ ಇರುವ ಇ-ಮಾಪನ್ ತಂತ್ರಾಂಶದಲ್ಲಿ, ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳಿಗೆ, ಅಂಗಡಿ ಮುಂಗಟ್ಟುಗಳವರಿಗೆ ನೀಡಲಾಗುತ್ತಿರುವ ಸತ್ಯಾಪನಾ ಪ್ರಮಾಣ ಪತ್ರ/ಮರು ಸತ್ಯಾಪನಾ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ನೀಡುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ್ದು, ಇದಕ್ಕಾಗಿ ತೂಕ ಅಳತೆ, ತೂಕ ಅಳತೆ ಸಾಧನಗಳನ್ನು ಉಪಯೋಗಿಸುತ್ತಿರುವವರು ಇಲಾಖೆಯ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸುವಂತೆ ಇ-ಮಾಪನ್ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಈ ಕೆಲಸ-ಕಾರ್ಯವನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಇನ್ನು ಮುಂದೆ ಸತ್ಯಾಪನಾ ಪ್ರಮಾಣ ಪತ್ರವನ್ನು ಪಡೆಯುವ ಸಂಬಂಧ ರಾಜ್ಯದ ಎಲ್ಲಾ ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳು, ಅಂಗಡಿ ಮುಂಗಟ್ಟುಗಳವರು ಹಾಗೂ ಇಲಾಖೆಯಿಂದ ಅನುಜ್ಞಾ ಪತ್ರಗಳನ್ನು ಪಡೆಯುವ ತಯಾರಕರು/ ಮಾರಾಟಗಾರರು ಮತ್ತು ದುರಸ್ಥಿದಾರರುಗಳು ಹಾಗೂ ಈ ಅನುಜ್ಞಾ ಪತ್ರಗಳನ್ನು ನವೀಕರಣ ಮಾಡಿಕೊಳ್ಳುವವರು ಸಹ ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕಾಗಿದ್ದು ಇದಕ್ಕೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಸಹಾಯಕ ನಿಯಂತ್ರಕರುಗಳು ಹಾಗೂ ನಿರೀಕ್ಷಕರುಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆದೇಶಿಸಿದೆ ಮತ್ತು ಸಹಾಯಕ ನಿಯಂತ್ರಕರುಗಳು ಅವರವರ ಕ್ಷೇತ್ರವ್ಯಾಪ್ತಿಗೆ ಸಂಬಂಧಿಸಿದಂತೆ

ಎಲ್ಲಾ ತಯಾರಕರು/ಮಾರಾಟಗಾರರು ಹಾಗೂ ದುರಸ್ತಿದಾರರು ಇನ್ನು ಮುಂದೆ ಇ–ಮಾಪನ್ ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸುವಂತೆ ತಿಳಿಸಲು ಕ್ರಮವಹಿಸಲು ಸಹ ಸೂಚಿಸಿದೆ.

ನಿಯಂತ್ರಕರು
ಕಾನೂನು ಮಾಪನಶಾಸ್ತ್ರ ಇಲಾಖೆ.

ಗೆ,

1. ರಾಜ್ಯದ ಎಲ್ಲಾ ಉಪನಿಯಂತ್ರಕರುಗಳ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಸಹಾಯಕ ನಿಯಂತ್ರಕರು ಹಾಗೂ ನಿರೀಕ್ಷಕರುಗಳ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ವ್ಯಾಪಾರಸರು/ ಕೈಗಾರಿಕೋದ್ಯಮಿಗಳು/ ತಯಾರಕರು/ ಮಾರಾಟಗಾರರು/ ದುರಸ್ತಿದಾರರುಗಳಿಗೆ (ವ್ಯಾಪಾರಸ್ಥರುಗಳಿಗೆ), ಸಂಬಂಧಿಸಿದ ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರುಗಳು ಹಾಗೂ ನಿರೀಕ್ಷಕರುಗಳ ಮುಖಾಂತರ.
4. ಉಪನಿಯಂತ್ರಕರು (ಆಡಳಿತ), ಕೇಂದ್ರ ಕಛೇರಿ, ಬೆಂಗಳೂರು.
5. ಸಹಾಯಕ ನಿಯಂತ್ರಕರು (ತಾಂತ್ರಿಕ), ಕೇಂದ್ರ ಕಛೇರಿ, ಬೆಂಗಳೂರು.
6. ಅಧೀಕ್ಷಕರು (ತಾಂತ್ರಿಕ) ಮತ್ತು (ಆಡಳಿತ), ಕೇಂದ್ರ ಕಛೇರಿ, ಬೆಂಗಳೂರು.
7. ನಿಯಂತ್ರಕರ ಆಪ್ತಶಾಖೆ.
8. ರಕ್ಷತಾ ಕಡತ ಮತ್ತು ಶಾಖಾ ರಕ್ಷತಾ ಕಡತ.
9. ಹೆಚ್ಚುವರಿ ಪ್ರತಿ.

ಪ್ರತಿಯನ್ನು:

1. ವ್ಯವಸ್ಥಾಪಕ ನಿರ್ದೇಶಕರು, ಮೆ:ಕಿಯೋನಿಕ್ಸ್, ಬೆಂಗಳೂರುರವರ ಮಾಹಿತಿಗೆ
2. ಇ–ಮಾಪನ್ ಹೆಲ್ಪ್‌ಡೆಸ್ಕ್‌ರವರಿಗೆ ಕಳುಹಿಸುತ್ತಾ, ಅರ್ಜಿದಾರರಿಗೆ ಹಾಗೂ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ತಂತ್ರಾಂಶದಲ್ಲಿ ಯಾವುದೇ ರೀತಿಯ ತೊಂದರೆಗಳುಂಟಾದಲ್ಲಿ ಅವುಗಳನ್ನು ತತ್‌ಕ್ಷಣದಲ್ಲಿ ಬಗೆಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.